ಶಿ.ಸರ

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/43/ಸಿಡಿಸಿ(2)/2013-14 /1912

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-56001.
ದಿನಾಂಕ: 26-08-2013

## ಸುತ್ತೋಲೆ

**ವಿಷಯ:** ರಾಜ್ಯದ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳು ಸ್ವಂತ ವೆಬ್ ಸೈಟ್‌ಗಳನ್ನು ಹೊಂದಲು ಹಾಗೂ ಅವುಗಳ ನಿಯತಕಾಲಿನ ನಿರ್ವಹಣೆಯ ಬಗ್ಗೆ.

**ಉಲ್ಲೇಖ:** All India Council for Technical Education New Delhi, vide Letter No. F.No.AICTE/SWRO(Karnataka)/Sub-mission Scheme/ Govt.Poly/ 2013-14, dated:30-04-2013.

*****

ಉಲ್ಲೇಖಿತ ಪತ್ರದಂತೆ (It shall be mandatory for the technical institution to maintain a website providing the prescribed information. The website information must be continuously updated as and when changes takes place) ಹಾಗೂ ಸರ್ಕಾರದ ನೀತಿಯಂತೆ Integrated Educational Management Information System ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್‌ಗಳು ಸ್ವಂತ ವೆಬ್ ಸೈಟ್‌ಗಳನ್ನು ಕಡ್ಡಾಯವಾಗಿ ಹೊಂದಿರಬೇಕಾಗಿರುತ್ತದೆ.

ಎಲ್ಲಾ ಸಂಸ್ಥೆಗಳ ಪ್ರವೇಶ ಪ್ರಕ್ರಿಯೆಗಳು, ಪರೀಕ್ಷಾ ಕಾರ್ಯಗಳ ವಿವರಗಳು, ದೈನಂದಿನ ಕಾರ್ಯನಿರ್ವಹಣೆಗಳ ಮಾಹಿತಿ ವಿನಿಮಯಗಳು, ಪಠ್ಯಕ್ರಮ ವಿಷಯಗಳು, ನಿಯಮಾವಳಿಗಳು, ಇ-ಮೇಲ್ ಸೌಲಭ್ಯ ಇತ್ಯಾದಿ ವಿಷಯಗಳನ್ನು ವೆಬ್ ಸೈಟ್ ಮುಖಾಂತರವೇ ವ್ಯವಹರಿಸಿ ಸರ್ಕಾರದ ನೀತಿಯಾದ "Paper Less office" ಉದ್ದೇಶದಂತೆ ಅನುಷ್ಠಾನಿಸಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಪ್ರತಿ ಸಂಸ್ಥೆಗಳು ಕಾರ್ಯನಿರ್ವಹಿಸಲು ಸ್ವಂತ ವೆಬ್ ಸೈಟ್‌ನ್ನು ಹೊಂದುವುದು ಅತ್ಯವಶ್ಯಕವಾಗಿರುತ್ತದೆ.

-2-

ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಹಾಗೂ ಪಾಲಿಟೆಕ್ನಿಕ್ ಸಂಸ್ಥೆಯ ಪ್ರಾಚಾರ್ಯರುಗಳು Web site Design, domain name Registration, web space & Web Hosting, ಇವುಗಳಿಗೆ ತಗಲುವ ವೆಚ್ಚಗಳನ್ನು ತಮ್ಮ ಸಂಸ್ಥೆಯ LIBRARY FEE / ಗ್ರಂಥಾಲಯ ನಿಧಿಯಲ್ಲಿ (Library Fund) ಜಮೆಯಾಗಿರುವ ಹಣದಿಂದ ವೆಚ್ಚವನ್ನು ಭರಿಸತಕ್ಕದ್ದು.

ಸಂಸ್ಥೆಯ ವೆಬ್ ಸೈಟ್ ವಿನ್ಯಾಸವನ್ನು ನಿರ್ದೇಶನಾಲಯದ ವೆಬ್ ಸೈಟ್‌ನೊಂದಿಗೆ ಸಂಪರ್ಕಿಸಲು ಅನುಕೂಲವಾಗುವಂತೆ ನಿರ್ದೇಶನಾಲಯದ ವೆಬ್ ಸೈಟ್ http://dte.kar.nic.in, ವಿನ್ಯಾಸದ ಮಾದರಿಯಂತೆ ವಿನ್ಯಾಸಗೊಳಿಸಲು ಸೂಚಿಸಲಾಗಿದೆ.

ಉದಾ: 1. http://gpt.place name.ac.in,;( http://gpt.tumkur.ac.in)
2. http://wpt.place name.ac.in,;( http://wpt.bangalore.ac.in)
3. http://gec.place name.ac.in,;( http://gec.hassan.ac.in)

ಈಗಾಗಲೇ ಸ್ವಂತ ವೆಬ್ ಸೈಟ್ ಹೊಂದಿರುವ ಸಂಸ್ಥೆಗಳು ವೆಬ್‌ಸೈಟ್‌ನ ಮಾಹಿತಿಯನ್ನು ಜಂಟಿ ನಿರ್ದೇಶಕರು(ಸಿಡಿಸಿ) ಇವರ ಇ-ಮೇಲ್ ವಿಳಾಸಕ್ಕೆ (jointdirector.cdc@gmail.com,) ಕೂಡಲೇ ಕಳುಹಿಸತಕ್ಕದ್ದು. ಉಳಿದ ಸಂಸ್ಥೆಯವರು ಈ ಸುತ್ತೋಲೆ ತಲುಪಿದ 2 ವಾರದೊಳಗಾಗಿ ತಮ್ಮ ಸಂಸ್ಥೆಯ ಹೆಸರಿನಲ್ಲಿ ವೆಬ್‌ಸೈಟ್‌ನ್ನು ಅನುಷ್ಠಾನಗೊಳಿಸಿದ ಬಗ್ಗೆ ವರದಿಯನ್ನು ನಿರ್ದೇಶನಾಲಯಕ್ಕೆ ಕಳುಹಿಸತಕ್ಕದ್ದು. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರೇ ನೇರ ಹೊಣೆಗಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು

26/8/13 26/8/13

ಇವರಿಗೆ:

1. ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳ ಹಾಗೂ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ, ಎರಡನೇ ಮಹಡಿ ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.